

ಡ್ಯಾನ್ ಡರ್ಕಿನ್ ಪತ್ನಿ ಕ್ರಿಸ್ಟೆನ್ ಕಿರ್ಚ್‌ಮನ್ ಮತ್ತು ಮಗಳು ಲಿಲಿ ಮೇರಿ ಜತೆಗೆ

# ದಿನಕ್ಕೊಂದು ಕನ್ನಡ ಶಬ್ದ!

**"There are no secrets to success. It is the result of preparation, hard work, and learning from failure..'**

–ಪರಿಶ್ರಮದ ಬಗ್ಗೆ ಚಿಂತಕ ಕಾಲಿನ್ ಪಾವೆಲ್ ಹೇಳಿದ ಮಹತ್ವದ ಸಾಲುಗಳಿವು. ಅಮೆರಿಕ ಮೂಲದ ಡ್ಯಾನ್ ಡರ್ಕಿನ್ ಅವರು ಕೂಡ ಪರಿಶ್ರಮವನ್ನು ಪ್ರೀತಿಸುವವರು. ಶ್ರಮದಾಯಕ ಕೆಲಸದ ಬಗ್ಗೆ ಇವರಿಗೆ ಬಲವಾದ ನಂಬಿಕೆ. ತಾವೂ ಪರಿಶ್ರಮಿ, ತನ್ನೊಡನೆ ಕೆಲಸ ಮಾಡುವವರೂ ಹಾರ್ಡ್‌ವರ್ಕ್ ಮಾಡಬೇಕು ಎನ್ನುವುದು ಇವರ ಮಂತ್ರ.

ಅಚ್ಚರಿಯ ಸಂಗತಿಯೆಂದರೆ ಡ್ಯಾನ್ ಡರ್ಕಿನ್ ಬೆಂಗಳೂರಿಗೆ ಬಂದು ಕೆಲವೇ ತಿಂಗಳುಗಳಾದರೂ ಇಲ್ಲಿನ ಜನರು ಶ್ರಮಜೀವಿಗಳು ಎಂಬುದನ್ನು ಗುರುತಿಸಿದ್ದಾರೆ. ಇದನ್ನು ಡ್ಯಾನ್ ಖುಷಿಯಿಂದ ಅಭಿವ್ಯಕ್ತಿಸುವುದು ಹೀಗೆ. 'ಬೆಂಗಳೂರಿನ ಜನ ಶ್ರಮಜೀವಿಗಳು, ಸಂಘಜೀವಿಗಳು ಕೂಡ. ತಾವು ಕೆಲಸ ಮಾಡುವ ಸಂಸ್ಥೆಯ ಬೆಳವಣಿಗೆಗೆ ಶಕ್ತಿಮೀರಿ ಶ್ರಮಿಸುತ್ತಾರೆ. ಬಹುತೇಕ ಜನ ವಾರದಲ್ಲಿ 6 ದಿನವೂ ಕೆಲಸ ಮಾಡುತ್ತಾರೆ, ಕೆಲವರು ಏಳು ದಿನ ಕೂಡ. ತಾವು ಮಾಡುವ ಕೆಲಸದ ಮೇಲೆ ಶ್ರದ್ಧೆ ಇಟ್ಟುಕೊಂಡು ಮಾಡುವುದರಿಂದ ಇಲ್ಲಿ ಅಭಿವೃದ್ಧಿ ಸಾಧ್ಯವಾಗಿದೆ'.

ಹೌದು. ಅಮೆರಿಕದ ಕೊಲರಡೊದ ಡ್ಯಾನ್ ಡರ್ಕಿನ್ ಈ ವರ್ಷದ ಜುಲೈ ಮಾಸಾಂತ್ಯದಲ್ಲಿ ಬೆಂಗಳೂರಿಗೆ ಬರುವ ಮೊದಲು ಸಿಂಗಪುರದಲ್ಲಿದ್ದರು. ಮೆಕ್ಸಿಕೊ ಮೂಲದ ಸರಣಿ ರೆಸ್ಟೋರೆಂಟ್‌ಗಳಿಗೆ ಸೇರಿದ 'ಹಬನೆರೊ ಫುಡ್ಸ್ ಕಂಪೆನಿ'ಯಲ್ಲಿ ಡರ್ಕಿನ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಚೀಫ್ ಎಕ್ಸಿಕ್ಯುಟಿವ್ ಆಫೀಸರ್). ಹೋಟೆಲ್‌ಗಳಲ್ಲಿ ವಹಿವಾಟಿನ ಅಭಿವೃದ್ಧಿ, ಗುಣಮಟ್ಟ ಮುಂತಾದವುಗಳ ಬಗ್ಗೆ ಪರಿಶೀಲನೆಯನ್ನು ಕೈಗೊಳ್ಳುವುದೂ ಇವರ ಕೆಲಸ. ಹೀಗಾಗಿ ಡ್ಯಾನ್ ಅವರ ಕಾರ್ಯಕ್ಷೇತ್ರ ಬೆಂಗಳೂರಷ್ಟೇ ಅಲ್ಲದೆ ಹೈದರಾಬಾದ್, ಚೆನ್ನೈ, ಸಿಂಗಪುರಗಳಿಗೂ ವಿಸ್ತರಿಸಿದೆ. ರೆಸ್ಟೋರೆಂಟ್ ಕಂಪೆನಿಯ ಸಿಇಒ ಆಗುವುದಕ್ಕೆ ಮೊದಲು ಚೆಫ್ ಆಗಿದ್ದರು. ಹೀಗಾಗಿ ಅವರಿಗೆ ಅಡುಗೆ ಮನೆಯ ಕಾರ್ಯವೈಖರಿ ಬಗ್ಗೆ ಚೆನ್ನಾಗಿ ಗೊತ್ತಿದೆ. ಸದ್ಯ ರೆಸ್ಟೋರೆಂಟ್‌ಗಳ ಗುಣಮಟ್ಟ ಕಾಪಾಡುವುದು ಆ ಮೂಲಕ ವಹಿವಾಟನ್ನು ಹೆಚ್ಚಿಸುವುದು ಇವರ ಪ್ರಮುಖ ಜವಾಬ್ದಾರಿಯಲ್ಲಿ ಸೇರಿದ್ದು ಅದನ್ನು ಶ್ರದ್ಧೆಯಿಂದ ಮಾಡುತ್ತಾರೆ.

ಡ್ಯಾನ್ ಡರ್ಕಿನ್ ಪತ್ನಿ ಕ್ರಿಸ್ಟೆನ್ ಕಿರ್ಚ್‌ಮನ್ ಮತ್ತು ಮಗಳು ಲಿಲಿ ಮೇರಿ ಡರ್ಕಿನ್ ಜತೆ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ವಾಸವಾಗಿದ್ದಾರೆ.

'ಭಾರತೀಯ ಸಂಸ್ಕೃತಿ, ಇಲ್ಲಿಯ ಹವಾಮಾನ ಚೆನ್ನಾಗಿದೆ. ಬಂದು ಕೆಲವೇ ದಿನಗಳಲ್ಲಿ ಇಲ್ಲಿಯ ಹವಾಗುಣಕ್ಕೆ ಹೊಂದಿಕೊಂಡಿದ್ದೇವೆ. ಆಫೀಸಿನಲ್ಲೇ ಹೆಚ್ಚು ಸಮಯ ಕಳೆಯುವ ಕಾರಣ ಹೊರಗೆ ಸುತ್ತಾಡಲು ಸಮಯವೇ ಇಲ್ಲದಾಗಿದೆ. ಹೀಗಾಗಿ ಇಲ್ಲಿನ ಭಾಷೆ, ಸಂಪ್ರದಾಯಗಳ ಬಗ್ಗೆ ಹೆಚ್ಚು ತಿಳಿದಿಲ್ಲ ಎಂದು ಉತ್ತರಿಸುತ್ತಾರೆ ಡ್ಯಾನ್.

ಭಾರತ, ಬೆಂಗಳೂರುಗಳ ಬಗ್ಗೆ ಮಾತನಾಡುವ ಡ್ಯಾನ್, 'ಇದೊಂದು ಸುಂದರ ದೇಶ. ಇಲ್ಲಿನ ಅನೇಕ ಪ್ರವಾಸಿ ತಾಣಗಳ ರಮಣೀಯತೆ ಬಗ್ಗೆ ಕೇಳಿ ತಿಳಿದಿದ್ದೇನೆ. ಕಚೇರಿ ಕೆಲಸದ ಮೇಲೆ ಹೈದರಾಬಾದ್‌ಗೆ ಹೋಗಿದ್ದೆ. ಅಲ್ಲಿ ಕೆಲವು ಪ್ರವಾಸಿ ತಾಣಗಳನ್ನು ನೋಡಿದ್ದೇನೆ. ಕೇರಳ, ಕೊಚ್ಚಿನ್‌ಗಳಿಗೂ ಹೋಗಿದ್ದು, ಅಲ್ಲಿನ ಸೌಂದರ್ಯವನ್ನು ಸವಿದಿದ್ದೇವೆ. ನಂದಿ ಹಿಲ್ಸ್ ತುಂಬ ಸುಂದರ ತಾಣ ಎಂಬುದನ್ನು ಕೇಳಿದ್ದೇನೆ. ಅಲ್ಲಿಗೆ ಸದ್ಯದಲ್ಲೇ ಹೋಗಿ ಬರಬೇಕು ಎಂಬ ಯೋಚನೆ ಇದೆ' ಎನ್ನುತ್ತಾರೆ.

ಅಮೆರಿಕ ಎಂದರೆ ಅದೊಂದು ಜಗತ್ತೇ ಬೇರೆ. ಅಲ್ಲಿಗೆ ಎಲ್ಲಾ ದೇಶಗಳಿಂದ ಜನ ಬಂದಿರುತ್ತಾರೆ. ಔದ್ಯೋಗಿಕವಾಗಿ, ಶೈಕ್ಷಣಿಕವಾಗಿ, ಪ್ರವಾಸಿ ತಾಣಗಳ ದೃಷ್ಟಿಯಿಂದ, ಐಷಾರಾಮದ ನಿಟ್ಟಿನಲ್ಲಿ ಅಮೆರಿಕ ಚೆನ್ನಾಗಿದೆ. ಮುಂದುವರಿದ ದೇಶವಾದ್ದರಿಂದ ಜನರ ಜೀವನಮಟ್ಟ, ಆರ್ಥಿಕ ಮಟ್ಟವೂ ಆಶಾದಾಯಕವಾಗಿದೆ. ಹೀಗಾಗಿ ಜಗತ್ತಿನ ನಾನಾ ಭಾಗದ ಜನರು ಶಿಕ್ಷಣಕ್ಕೆ, ಉದ್ಯೋಗಕ್ಕೆ ಅಮೆರಿಕವನ್ನೇ ಆಯ್ದುಕೊಳ್ಳುತ್ತಾರೆ. ಅಮೆರಿಕದ ಸಾಮಾಜಿಕ ವ್ಯವಸ್ಥೆಯೂ ಚೆನ್ನಾಗಿದೆ. ಕಚೇರಿಗಳಲ್ಲಿ ಕೆಲಸ ಮಾಡುವಾಗ ಸಹೋದ್ಯೋಗಿಗಳು ಆದಷ್ಟು ಸ್ವತಂತ್ರವಾಗಿರಲು ಬಯಸುತ್ತಾರೆ ಎಂದು ತಮ್ಮ ದೇಶದ ಬಗ್ಗೆ ಅಭಿಮಾನದ ಮಾತಿಗಳನ್ನಾಡುತ್ತಾರೆ ಡ್ಯಾನ್.

## ಭಾಷೆಯ ಬಗ್ಗೆ ಕುತೂಹಲ

'ಕನ್ನಡ ಭಾಷೆಯ ಬಗ್ಗೆ ಕುತೂಹಲವಿದೆ. ಭಾಷೆ ಕಲಿಯಲು ಇಷ್ಟ. ಇಲ್ಲಿ ನನ್ನ ಸಹೋದ್ಯೋಗಿ ಒಬ್ಬರು ದಿನಕ್ಕೆ ಒಂದು ಕನ್ನಡ ಶಬ್ದ ಕಲಿಸುವುದಾಗಿ ಭರವಸೆ ಕೊಟ್ಟಿದ್ದಾಳೆ. ಇದುವರೆಗೆ 'ಹೌದು, ಇಲ್ಲ, ನನಗೆ ಬೇಡ..' ಇಷ್ಟು ಶಬ್ದಗಳನ್ನು ಕಲಿತಿದ್ದೇನೆ. ಕನ್ನಡ ಮಾತಾಡುವುದನ್ನು ಕೇಳುವಾಗ ಥ್ರಿಲ್ ಆಗುತ್ತದೆ. ಆದರೆ ಇಲ್ಲಿ ನಾನು ಭಾಷೆಯ ಸಮಸ್ಯೆ ಎದುರಿಸಿಲ್ಲ. ಎಲ್ಲರೂ ಚೆನ್ನಾಗಿ ಇಂಗ್ಲಿಷ್ ಮಾತನಾಡುತ್ತಾರೆ. ನಾನು ಕೆಲಸ ಮಾಡುವ ರೆಸ್ಟೊರೆಂಟ್‌ನಲ್ಲಿ ತೀರಾ ಕೆಳಹಂತದ ಕೆಲಸಗಾರರು ಕೂಡ ಉತ್ತಮ ಇಂಗ್ಲಿಷ್ ಮಾತನಾಡಬಲ್ಲರು ಎನ್ನುತ್ತಾರೆ ಡ್ಯಾನ್.

ಹಬ್ಬದ ಆಚರಣೆ ಬಗ್ಗೆಯೂ ಡ್ಯಾನ್ ಕುಟುಂಬಕ್ಕೆ ಬಹಳ ಕುತೂಹಲ. 'ಇತ್ತೀಚೆಗೆ ಇಲ್ಲಿ ನಡೆದ ಗಣೇಶ ಹಬ್ಬ ಆಚರಣೆ ನೋಡಿದೆ. ಬಹಳ ಚೆನ್ನಾಗಿದೆ. ಇದರ ಬೆನ್ನಲ್ಲೇ ಓಣಂ ಹಬ್ಬವೂ ಇತ್ತು. ಸ್ನೇಹಿತರು ನಮ್ಮನ್ನು ಓಣಂ ಹಬ್ಬಕ್ಕೆ ಆಹ್ವಾನಿಸಿದ್ದರು. ಇಲ್ಲಿ ಜನರ ಆತಿಥ್ಯ ಚೆನ್ನಾಗಿದೆ. ಅದೊಂದು ರೀತಿಯಲ್ಲಿ ಮಜಾ ಅನಿಸಿತು. ಗಣೇಶ ಚತುರ್ಥಿ ಆಚರಣೆಯಂತೂ ಎಂದೂ ಮರೆಯುವ ಹಾಗಿಲ್ಲ. ಊಟ ತಿಂಡಿಯೂ ರುಚಿಕರವಾಗಿದೆ. ಆದರೂ ಮೆಕ್ಸಿಕೋದ ಆಹಾರ ಹೆಚ್ಚು ಶುದ್ಧವಾಗಿರುತ್ತದೆ, ಗುಣಮಟ್ಟದಲ್ಲಿ ಚೆನ್ನಾಗಿರುತ್ತದೆ. ನಾನು ಅಮೆರಿಕ, ಚೀನಾ ದೇಶಗಳ ಆಹಾರವನ್ನು ಮಿಸ್ ಮಾಡಿಕೊಳ್ತಾ ಇದ್ದೇನೆ ಅನಿಸುತ್ತಿದೆ ಎಂದು ಅಭಿಪ್ರಾಯ ಪಡುತ್ತಾರೆ ಡ್ಯಾನ್ ಡರ್ಕಿನ್.

■ **ಅವನೀಶ್**